ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

# ಹೊರಟ್ಟಿ ಬೆಂಬಲಕ್ಕೆ ಬಿಜೆಪಿ ವಿಪ್ ಜಾರಿ

ಸಂ.ಕ.ಸಮಾಚಾರ ಬೆಂಗಳೂರು

ಶತಾಯಗತಾಯ ಗೋಹತ್ಯೆ ತಡೆ ವಿಧೇಯಕ ಅಂಗೀಕರಿಸಬೇಕೆಂಬ ಬಿಜೆಪಿ ನಿಲುವು ವಿಧಾನ ಪರಿಷತ್‌ನಲ್ಲಿ ಸೋಮವಾರ ಅನುಷ್ಠಾನಗೊಳ್ಳುತ್ತಿದ್ದಂತೆಯೇ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾವೇರಿಯಲ್ಲಿ ಬಿಜೆಪಿ ಪರಿಷತ್ ಸದಸ್ಯರು ಹಾಗೂ ಸಚಿವರ ಜತೆ ಸಭೆ ನಡೆಸಿದರು.

ಮಂಗಳವಾರ ನಡೆಯಲಿರುವ ಪರಿಷತ್ ಸಭಾಪತಿ ಆಯ್ಕೆ ಚುನಾವಣೆ ಕುರಿತಂತೆ ಶಾಸಕರ ಜತೆ ಚರ್ಚೆ ನಡೆಸಿದ ಸಿಎಂ ಯಡಿಯೂರಪ್ಪ, ಜೆಡಿಎಸ್ ಮುಖಂಡ ಬಸವರಾಜ ಹೊರಟ್ಟಿ ಆಯ್ಕೆಗೆ ಎಲ್ಲ ಸದಸ್ಯರು ಸಹಕಾರ ನೀಡಬೇಕು. ಈಗಾಗಲೇ ಬಿಜೆಪಿಯಿಂದ ಉಪ ಸಭಾಪತಿ ಆಯ್ಕೆಗೆ ಜೆಡಿಎಸ್ ನೆರವು ನೀಡಿದ್ದು, ಅದೇ ರೀತಿ ಜೆಡಿಎಸ್‌ಗೆ ಬೆಂಬಲಿಸಬೇಕೆಂದು ಸೂಚನೆ ನೀಡಿದರು.

ನಾಳೆ ನಡೆಯಲಿರುವ ಪರಿಷತ್ ಚುನಾವಣೆ ಸಂಬಂಧ ಬಿಜೆಪಿ ತನ್ನ ಸದಸ್ಯರಿಗೆ ವಿಪ್ ಜಾರಿ ಮಾಡಿದ್ದು, ಎಲ್ಲರೂ

- ಶಾಸಕರ ಜತೆ ಸಿಎಂ ಚರ್ಚೆ
- ಹೊರಟ್ಟಿಗೆ ಬಿಜೆಪಿ ಬೇಷರತ್ ಬೆಂಬಲ
- ಹೊರಟ್ಟಿ ಪರ ಮತಕ್ಕೆ ಯಡಿಯೂರಪ್ಪ ತಾಕೀತು

ಕಡ್ಡಾಯವಾಗಿ ಕಲಾಪಕ್ಕೆ ಹಾಜರಾಗಬೇಕು ಹಾಗೂ ಪಕ್ಷದ ನಿರ್ಧಾರದಂತೆ ಜೆಡಿಎಸ್ ಅಭ್ಯರ್ಥಿ ಹೊರಟ್ಟಿ ಅವರಿಗೆ ಮತ ಹಾಕಬೇಕೆಂದು ಸೂಚಿಸಲಾಗಿದೆ.

ಸಭೆಯಲ್ಲಿ ಡಿಸಿಎಂಗಳಾದ ಗೋವಿಂದ ಕಾರಜೋಳ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಲಕ್ಷ್ಮಣ ಸವದಿ, ಸಚಿವರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ್, ಅರವಿಂದ ಲಿಂಬಾವಳಿ, ಪರಿಷತ್ ಸದಸ್ಯರಾದ ಎಸ್.ರವಿಕುಮಾರ್, ವೈ.ಎ.ನಾರಾಯಣಸ್ವಾಮಿ, ಎಸ್.ವಿ.ಸಂಕನೂರ, ಎಚ್.ವಿಶ್ವನಾಥ್, ಲೆಹರ್ ಸಿಂಗ್ ಮತ್ತಿತರರು ಪಾಲ್ಗೊಂಡಿದ್ದರು.



ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಧಿಕಾರಿಗಳೊಂದಿಗೆ ಬಜೆಟ್ ಪೂರ್ವಭಾವಿ ಸಭೆ ನಡೆಸಿದರು. ಈ ವೇಳೆ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ, ಹಣಕಾಸು ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.